# ಸೂಚನಾ ಕೈಪಿಡಿ



**ELUPIHALER**
**(ಸ್ಮಾರ್ಟ್ ಡ್ರೈ ಪೌಡರ್ ಇನ್ಹೇಲರ್)**

**LUPIN LIMITED (ಲುಪಿನ್ ಲಿಮಿಟೆಡ್)**

**ಮುಂಬೈ**

# ವಿಚಾರಗಳು

eLupihaler ಕುರಿತು ........................................................ 3
ನಿಮಗೆ eLupihaler ಏಕೆ ಮುಖ್ಯ? ........................................ 3
ಚಿಕಿತ್ಸೆಯ ಪಾಲನೆಯನ್ನು ಸುಧಾರಿಸಲು eLupihaler ಹೇಗೆ ಸಹಾಯ ಮಾಡುತ್ತದೆ? ........................................ 3
ಶ್ವಾಸಕೋಶಕ್ಕೆ ಸಂಬಂಧಿತ ಸಮಸ್ಯೆಗಳನ್ನು ಸುಧಾರಿಸಲು eLupihaler ಹೇಗೆ ಸಹಾಯ ಮಾಡುತ್ತದೆ? ........................ 3
eLupihaler ನ ಭಾಗಗಳು ........................................................ 4
ELUPIHALER ಅನ್ಪ್ಯಾಕ್ಸಿಂಗ್ ........................................................ 6
eLupihaler ಸೆಟಪ್ ........................................................ 7
ಮೊಬೈಲ್ ಅಪ್ಲಿಕೇಶನ್‌ಗೆ ಸಂಪರ್ಕಿಸುವುದು .................. 13
ಸಾಧನವನ್ನು ಆನ್ ಮಾಡುವುದು .................................. 18
ಔಷಧಿ ವೇಳಾಪಟ್ಟಿ ನಿರ್ವಹಣೆ ................................ 19
eLupihaler ನಿಂದ ಔಷಧಿಯನ್ನು ತೆಗೆದುಕೊಳ್ಳುವುದು ಹೇಗೆ 22
ಪಾಲನೆದಾರರನ್ನು (Caregiver) ಸೇರಿಸುವುದು .................. 28
ಪಾಲನೆದಾರರ ಕಾರ್ಯವಿಧಾನ (Caregiver Flow) ............. 30
ಬ್ಯಾಟರಿ ಅವಧಿ ........................................................ 35
ಸುರಕ್ಷತಾ ಮುನ್ನೆಚ್ಚರಿಕೆಗಳು ........................................ 35
ಬಳಸಲಾದ ಚಿಹ್ನೆಗಳು ........................................................ 36
ಎಚ್ಚರಿಕೆಗಳು ........................................................ 36
ಪ್ರಮುಖ ಸೂಚನೆ ........................................................ 37

## eLupihaler ಕುರಿತು

- eLupihaler ಎಂಬುದು ಒಂದು ಸ್ಮಾರ್ಟ್, ಬ್ಲೂಟೂತ್-ಸಕ್ರಿಯಗೊಳಿಸಿದ ಡ್ರೈ ಪೌಡರ್ ಇನ್ಹೇಲರ್ (ಒಣ ಪುಡಿಯ ಇನ್ಹೇಲರ್) ಆಗಿದೆ.
- ಈ ಇನ್ಹೇಲರ್ ನೀವು ಔಷಧೋಪಚಾರವನ್ನು ತೆಗೆದುಕೊಳ್ಳುವ ದಿನಾಂಕ ಮತ್ತು ಸಮಯವನ್ನು ದಾಖಲಿಸುತ್ತದೆ ಹಾಗೂ ಅದನ್ನು ಎಷ್ಟು ದೀರ್ಘವಾಗಿ ತೆಗೆದುಕೊಳ್ಳುವ ಕ್ರಿಯೆಯನ್ನು (ಅಂದರೆ, ಎಷ್ಟು ಆಳವಾಗಿ ಮತ್ತು ಎಷ್ಟು ಅವಧಿಯವರೆಗೆ ಉಸಿರನ್ನು ಒಳಗೆ ತೆಗೆದುಕೊಳ್ಳುತ್ತೀರಿ ಎಂಬುದನ್ನು) ದಾಖಲಿಸುತ್ತದೆ.
- ಆಂಡ್ರಾಯ್ಡ್ ಓಎಸ್ (Android OS) ಆವೃತ್ತಿ 7.0 ಮತ್ತು ಅದಕ್ಕಿಂತ ಮೇಲ್ಪಟ್ಟ ಆವೃತ್ತಿ ಹಾಗೂ ಆಪಲ್ ಐಒಎಸ್ (Apple iOS) 16.0 (iPhone 12 ಮತ್ತು ಅದಕ್ಕಿಂತ ಹೆಚ್ಚಿನ ಮಾದರಿಗಳು) ಆವೃತ್ತಿಗಳೊಂದಿಗೆ ಹೊಂದಾಣಿಕೆಯಾಗುವ ಮೊಬೈಲ್ ಅಪ್ಲಿಕೇಶನ್ ಮೂಲಕ, ಈ ದಾಖಲೆಗಳನ್ನು ಪರಿಶೀಲನೆಗಾಗಿ ನಿಮ್ಮ ಸ್ಮಾರ್ಟ್‌ಫೋನ್‌ಗೆ ವರ್ಗಾಯಿಸಲು ನಿಮಗೆ ಅವಕಾಶನೀಡುತ್ತದೆ. ನಿಮ್ಮ ಆರೈಕೆದಾರರು ಮತ್ತು ವೈದ್ಯರು ಕೂಡ ಈ ಮಾಹಿತಿಯನ್ನು ಪರಿಶೀಲಿಸಲು ಅವಕಾಶ ನೀಡಬಹುದು.
- ಬಳಕೆಯ ಸಮಯದಲ್ಲಿ ಸಾಧನದಲ್ಲಿ ಎರಡು ಎಲ್ಇಡಿ (LED) ದೀಪಗಳ ಮೂಲಕ ದೃಶ್ಯ ಸೂಚನೆಗಳನ್ನು ನೀಡಲಾಗುತ್ತದೆ. ಇವು ಉಸಿರನ್ನು ಒಳಗೆ ತೆಗೆದುಕೊಳ್ಳುವ ಸರಿಯಾದ ಕ್ರಮದ ಬಗ್ಗೆ ನಿಮಗೆ ಮಾರ್ಗದರ್ಶನ ನೀಡುತ್ತವೆ.
- eLupihaler ಮೊಬೈಲ್ ಅಪ್ಲಿಕೇಶನ್‌ನೊಂದಿಗೆ, ವೈದ್ಯರು ಸೂಚಿಸಿದಂತೆ ಔಷಧಿಯನ್ನು ತೆಗೆದುಕೊಳ್ಳಲು ಸಹಾಯವಾಗುವಂತೆ ದೈನಂದಿನ ಡೋಸ್ (ಔಷಧದ ಪ್ರಮಾಣ) ಜ್ಞಾಪನೆಗಳನ್ನು ನೀವು ಪಡೆಯಬಹುದು.
- ನಿಮ್ಮ ಪ್ರಸ್ತುತ ಸ್ಥಳದ ಆಧಾರದ ಮೇಲೆ, ಗಾಳಿಯ ಗುಣಮಟ್ಟ ಸೂಚ್ಯಂಕ (AQI), ಗಾಳಿಯ ವೇಗ ಮತ್ತು ತಾಪಮಾನದ ಕುರಿತಾದ ನೈಜ-ಸಮಯದ (real-time) ಪರಿಷ್ಕೃತ ಮಾಹಿತಿಗಳು ಮೊಬೈಲ್ ಅಪ್ಲಿಕೇಶನ್‌ನಲ್ಲಿ ಪ್ರದರ್ಶಿಸಲ್ಪಡುತ್ತವೆ; ಇದು ತುರ್ತು ಸಂದರ್ಭದಲ್ಲಿ ಬಳಸುವ ಔಷಧೋಚಾರದೊಂದಿಗೆ (rescue medication) ಸಿದ್ಧರಾಗಿರಲು ನಿಮಗೆ ಸಹಾಯ ಮಾಡುತ್ತದೆ.
- ಈ ಮೊಬೈಲ್ ಅಪ್ಲಿಕೇಶನ್ ದೈನಂದಿನ, ಸಾಪ್ತಾಹಿಕ ಅಥವಾ ಮಾಸಿಕ ಕಾಲಮಾನದ ಪ್ರಕಾರ, ಸಂಪೂರ್ಣ ಬಳಕೆಯ ವರದಿಯೊಂದನ್ನು ಒದಗಿಸುತ್ತದೆ, ಇದರಿಂದಾಗಿ ನಿಮ್ಮ DPI ಬಳಕೆಯನ್ನು ನೀವು ಟ್ರ್ಯಾಕ್ ಮಾಡಬಹುದು.

## ನಿಮಗೆ eLupihaler ಏಕೆ ಮುಖ್ಯ?

- eLupihaler ಜೊತೆಗೆ, ನಿಮ್ಮ ಚಿಕಿತ್ಸೆಯನ್ನು ಕ್ರಮಬದ್ಧವಾಗಿ ಮುಂದುವರಿಸುವುದು ಸುಲಭ ಮತ್ತು ಇದು ನಿಮಗೆ ಸಮಯೋಚಿತ ಪರಿಹಾರವನ್ನು ನೀಡುತ್ತದೆ.
- ಚಿಕಿತ್ಸೆಯನ್ನು ಸರಿಯಾಗಿ ಪಾಲಿಸುವುದರಿಂದ ರೋಗವು ಉಲ್ಬಣಗೊಳ್ಳುವುದನ್ನೂ ಸಹ ತಡೆಯಬಹುದು ಮತ್ತು ನಿಮ್ಮ ಜೀವನದ ಗುಣಮಟ್ಟವನ್ನು ಸುಧಾರಿಸಬಹುದು.

## ಚಿಕಿತ್ಸೆಯ ಪಾಲನೆಯನ್ನು ಸುಧಾರಿಸಲು eLupihaler ಹೇಗೆ ಸಹಾಯ ಮಾಡುತ್ತದೆ?

- ನಿಮ್ಮ ವೈದ್ಯರು ಸೂಚಿಸಿದ ಪ್ರಮಾಣದ ಆವರ್ತನದ (ದಿನಕ್ಕೆ ಒಮ್ಮೆ/ಎರಡು ಬಾರಿ, ಇತ್ಯಾದಿ) ಪ್ರಕಾರ, ಸರಿಯಾದ ಸಮಯದಲ್ಲಿ DPI (ಇನ್ಹೇಲರ್) ತೆಗೆದುಕೊಳ್ಳುವಂತೆ eLupihaler ಆ್ಯಪ್ ಒಂದು ಜ್ಞಾಪನೆಯನ್ನು ಅಥವಾ ಅಧಿಸೂಚನೆಯನ್ನು ನೀಡುತ್ತದೆ.
- ನಿಮ್ಮ ಪ್ರಸ್ತುತ DPI ಸಾಧನದಿಂದ ಎಷ್ಟು ಡೋಸ್‌ಗಳನ್ನು (ಔಷಧದ ಪ್ರಮಾಣಗಳನ್ನು) ಬಳಸಲಾಗಿದೆ ಎಂಬುದನ್ನು eLupihaler ಆ್ಯಪ್ ತೋರಿಸುತ್ತದೆ.

## ಶ್ವಾಸಕೋಶಕ್ಕೆ ಸಂಬಂಧಿತ ಸಮಸ್ಯೆಗಳನ್ನು ಸುಧಾರಿಸಲು eLupihaler ಹೇಗೆ ಸಹಾಯ ಮಾಡುತ್ತದೆ?

- ಉಸಿರೆಳೆದುಕೊಳ್ಳುವಿಕೆಯ ಗುಣಮಟ್ಟವನ್ನು ಮಾಪನಗೈಯಲು, ಆ ಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು (ಡೇಟಾ) ದಾಖಲಿಸುವ ಮೂಲಕ, ಸಂಗ್ರಹಿಸಿಕೊಂಡು ಅದನ್ನು ಮೊಬೈಲ್ ಆ್ಯಪ್‌ಗೆ

ವರ್ಗೀಯಿಸಲಾಗುತ್ತದೆ. ಬಣ್ಣದ ಸಂಕೇತಗಳು, ವಿವರಣಾತ್ಮಕ ಟೆಕ್ಸ್ಟ್‌ಗಳು ಮತ್ತು ಗ್ರಾಫ್‌ಗಳ ಮೂಲಕ, ಮೊಬೈಲ್ ಆ್ಯಪ್ ವರದಿಗಳನ್ನು ಸಿದ್ಧಪಡಿಸುತ್ತದೆ. ಇವು ಬಳಕೆದಾರರಿಗೆ ತಮ್ಮ ಉಸಿರೆಳೆದುಕೊಳ್ಳುವ ವಿಧಾನವನ್ನು ಅರ್ಥಮಾಡಿಕೊಳ್ಳಲು ಮತ್ತು ಸುಧಾರಿಸಲು ಸಹಾಯ ಮಾಡುತ್ತವೆ, ತನ್ಮೂಲಕ ಔಷಧಸೇವನೆಯ ಪರಿಣಾಮಕಾರಿತ್ವವು ಹೆಚ್ಚಾಗುವ ಸಾಧ್ಯತೆಯಿದೆ.

## eLupihaler ನ ಭಾಗಗಳು


PROTECTIVE CAP
POWER INDICATOR LED
ACTUATOR
ELECTRONIC ASSEMBLY
BATTERY ACTIVATOR
DPI CAPSULE GOES HERA

ELUPIHALER ಅನ್ಪ್ಯಾಕ್ಸಿಂಗ್

- ಪೆಟ್ಟಿಗೆಯನ್ನು ನೇರವಾಗಿ ಹಿಡಿದು ಮಧ್ಯಭಾಗದಿಂದ ಸಾಧನವನ್ನು ಎಚ್ಚರಿಕೆಯಿಂದ ಹೊರತೆಗೆದುಕೊಳ್ಳಿ.




- eLupihaler ಆಪ್ ಡೌನ್‌ಲೋಡ್ ಮಾಡಲು ಎಡಭಾಗದಲ್ಲಿರುವ QR ಕೋಡ್ ಅನ್ನು ಸ್ಕ್ಯಾನ್ ಮಾಡಿ.



# eLupihaler ಸೆಟಪ್




- ಮೊದಲ ಬಾರಿಗೆ ಬಳಸುವಾಗ eLupihaler ನ ಸ್ವಾಗತ ಪರದೆಯು (Welcome Screen) ಸಿದ್ಧಗೊಳ್ಳಲು (initialize) ಕೆಲವೇ ಸೆಕೆಂಡುಗಳನ್ನು ತೆಗೆದುಕೊಳ್ಳುತ್ತದೆ.




- ಡೇಟಾ ವಿನಿಮಯ ಮಾಡಲು ಸಾಧನಕ್ಕೆ ಬ್ಲೂಟೂತ್ (Bluetooth) ಅನುಮತಿಗಳ ಅಗತ್ಯವಿರುವುದರಿಂದ 'Continue' (ಮುಂದುವರಿಸಿ) ಎನ್ನುವುದರ ಮೇಲೆ ಕ್ಲಿಕ್ ಮಾಡಿ.
- ನಿಮ್ಮ ಪ್ರಸ್ತುತ ಸ್ಥಳದ ನಿಖರವಾದ ಗಾಳಿಯ ಗುಣಮಟ್ಟದ ಮಾನದಂಡಗಳನ್ನು ಒದಗಿಸಲು 'Location access' (ಸ್ಥಳದ ಅನುಮತಿ) ಬೇಕಾಗುತ್ತದೆ.

- ಒಮ್ಮೆ ಎಲ್ಲಾ ಸೂಚನೆಗಳನ್ನು ಓದಿದ ನಂತರ ದಯವಿಟ್ಟು 'I Understand & Continue' ಎನ್ನುವ (ನನಗೆ ಅರ್ಥವಾಗಿದೆ ಮತ್ತು ಮುಂದುವರಿಸಿ) ಬಟನ್ ಮೇಲೆ ಕ್ಲಿಕ್ ಮಾಡಿ.




- ದಯವಿಟ್ಟು ನಿಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಮತ್ತು ನಿಯಮಗಳು ಹಾಗೂ ಷರತ್ತುಗಳನ್ನು (Terms & Conditions) ಚೆನ್ನಾಗಿ ಓದಿ ಒಪ್ಪಿಕೊಂಡ ನಂತರದಲ್ಲಿ ಅಲ್ಲಿರುವ ಚೆಕ್‌ಬಾಕ್ಸ್ ಅನ್ನು ಕ್ಲಿಕ್ ಮಾಡಿ.



- SMS ನಲ್ಲಿ ಸ್ವೀಕರಿಸಿದ OTP ಅನ್ನು ನಮೂದಿಸಿ ಮತ್ತು 'Submit' (ಸಲ್ಲಿಸಿ) ಬಟನ್ ಮೇಲೆ ಕ್ಲಿಕ್ ಮಾಡಿ; ಅಥವಾ ನೀವು ಯಾವುದೇ OTP ಯನ್ನು ಪಡೆಯದಿದ್ದ ಪಕ್ಷದಲ್ಲಿ (60 ಸೆಕೆಂಡುಗಳ ಕೌಂಟ್‌ಡೌನ್ ನಂತರ) 'Resend OTP' (OTP ಮರುಕಳುಹಿಸಿ) ಆಯ್ಕೆಯನ್ನು ಆರಿಸಿ.




- ಅಪ್ಲಿಕೇಶನ್ ಅನ್ನು ಭವಿಷ್ಯದಲ್ಲಿ ಬಳಸಲು ಮತ್ತು ಅನಧಿಕೃತ ಬಳಕೆಯಿಂದ ಅದನ್ನು ರಕ್ಷಿಸುವ ಉದ್ದೇಶದಿಂದ, ನೀವು 4-ಅಂಕಿಯ MPIN ಅನ್ನು ಹೊಂದಿಸಬಹುದು ಅಥವಾ ಬಯೋಮೆಟ್ರಿಕ್ ದೃಢೀಕರಣವನ್ನು ಸಕ್ರಿಯಗೊಳಿಸಬಹುದು.



- ನೀವು MPIN ಆಯ್ಕೆಯನ್ನು ಆರಿಸಿಕೊಂಡಿದ್ದರೆ, 4-ಅಂಕಿಯ MPIN ಅನ್ನು ಹೊಂದಿಸಿ ಮತ್ತು ದೃಢೀಕರಿಸಿ.




- eLupihaler ಗೆಂದೇ ಬಳಸಬೇಕಾದ ಬಯೋಮೆಟ್ರಿಕ್ ದೃಢೀಕರಣವನ್ನು (ಸಾಧನದ ಮಟ್ಟದಲ್ಲಿ ಕಾನ್ಫಿಗರ್ ಮಾಡಲಾದದ್ದು) ದೃಢೀಕರಿಸಿ ಅಥವಾ ಸಕ್ರಿಯಗೊಳಿಸಿ.



- ದಯವಿಟ್ಟು ನಿಮ್ಮ ಪಾತ್ರವನ್ನು (role) 'ರೋಗಿ' (Patient) ಎಂದು ಅಥವಾ 'ಪಾಲನೆ ಮಾಡುವವರು' (Caregiver) ಎಂದು ಆಯ್ಕೆಮಾಡಿ.
- ರೋಗಿಯ ಪಾತ್ರಕ್ಕಾಗಿ, ಮುಂದುವರಿಯಲು > ಬಟನ್ ಮೇಲೆ ಕ್ಲಿಕ್ ಮಾಡಿ.
- Caregiver (ಪಾಲನೆ ಮಾಡುವವರ) ಪಾತ್ರಕ್ಕಾಗಿ, Caregiver Flow ವಿಭಾಗವನ್ನು ನೋಡಿ.




- ದಯವಿಟ್ಟು ನಿಮ್ಮ ಆಯ್ಕೆಯನ್ನು ದೃಢೀಕರಿಸಿ.



- ನಿಮ್ಮ ಮೂಲ ಪ್ರೊಫೈಲ್ ವಿವರಗಳನ್ನು ನಿರ್ವಹಿಸಲು 'ಮುಂದುವರಿಸಿ' (> ಬಟನ್) ಬಟನ್ ಮೇಲೆ ಕ್ಲಿಕ್ ಮಾಡಿ.




- ಹೆಸರು, ಲಿಂಗ ಮುಂತಾದ ಮೂಲ ವಿವರಗಳನ್ನು ಭರ್ತಿ ಮಾಡುವ ಮೂಲಕ ನಿಮ್ಮ ಪ್ರೊಫೈಲ್ ಅನ್ನು ದಯವಿಟ್ಟು ಪೂರ್ಣಗೊಳಿಸಿ.



# ಮೊಬೈಲ್ ಅಪ್ಲಿಕೇಶನ್‌ಗೆ ಸಂಪರ್ಕಿಸುವುದು

ಸ್ಕ್ರೀನ್‌ಗಳ ಮುಂದಿನ ಸೆಟ್, ಮೊದಲ ಬಾರಿಗೆ eLupihaler ಅನ್ನು ಮೊಬೈಲ್ ಅಪ್ಲಿಕೇಶನ್‌ಗೆ ಸಂಪರ್ಕಿಸುವ ಬಗ್ಗೆ ನಿಮಗೆ ಮಾರ್ಗದರ್ಶನ ನೀಡುತ್ತವೆ.

- ಪೆಟ್ಟಿಗೆಯನ್ನು ನೇರವಾಗಿ (ಲಂಬವಾಗಿ) ಹಿಡಿದುಕೊಳ್ಳಿ ಮತ್ತು ಮೇಲ್ಭಾಗದಿಂದ ಸಾಧನವನ್ನು ಎಚ್ಚರಿಕೆಯಿಂದ ಹೊರತೆಗೆಯಿರಿ.




- ತೋರಿಸಿರುವಂತೆ ಇನ್ಹೇಲರ್ ಅನ್ನು ಜಾಗ್ರತೆಯಿಂದ ಹಿಡಿದುಕೊಂಡು ಟ್ರೇನಿಂದ ಇನ್ಹೇಲರ್ ಅನ್ನು ಹೊರತೆಗೆಯಿರಿ.



- ಸಾಧನವನ್ನು ಬಳಸುತ್ತಿರುವಾಗ, ಪವರ್-ಇಂಡಿಕೇಟರ್ LED ನಿಮ್ಮ ಕಡೆಗೆ ಇರುವಂತೆ ಇನ್ಹೇಲರ್ ಅನ್ನು ಹಿಡಿದುಕೊಳ್ಳಿ.




- ಸಾಧನದ ಬ್ಯಾಟರಿಯನ್ನು ಆನ್ ಮಾಡಿ – ಸಾಧನವನ್ನು ಓರೆಯಾಗಿಸಿ ಮತ್ತು ಮೇನ್ ಡಿವೈಸ್ ಒಳಕ್ಕೆ ಗಟ್ಟಿಯಾಗಿ ಹೊಂದಿಕೊಳ್ಳುವವರೆಗೆ (ಕ್ಲಿಕ್ ಶಬ್ದ ಬರುವತನಕ) ಬಟನ್ ಕವರ್ ಅನ್ನು ನಿಧಾನವಾಗಿ ಒತ್ತಿರಿ (ಪುಶ್ ಮಾಡಿ).



- ಒಮ್ಮೆ ಸಾಧನವು ಆನ್ ಆದ ನಂತರ, ಅದು ಜೋಡಿ (pair) ಆಗುವವರೆಗೆ ಬ್ಲೂ LED ಪ್ರತಿ 2 ಸೆಕೆಂಡುಗಳಿಗೆ ಮಿನುಗುತ್ತಿರುತ್ತದೆ.




- Connect Device' (ಸಾಧನವನ್ನು ಸಂಪರ್ಕಿಸಿ)ಮೇಲೆ ಕ್ಲಿಕ್ ಮಾಡುವ ಮೂಲಕ ಬ್ಲೂಟೂತ್‌ನಿಂದ ಸಾಧನಕ್ಕೆ ಸಂಪರ್ಕಿಸುವ ಸಮಯವಿದು.



- eLupihaler ಸಾಧನಗಳನ್ನು ಸ್ಕ್ಯಾನ್ ಮಾಡಲು 'Scan for Devices' ಮೇಲೆ ಕ್ಲಿಕ್ ಮಾಡಿ.




- ಸ್ಕ್ಯಾನ್ ಮಾಡಲಾದ eLupihaler ಸಾಧನಗಳ ಪಟ್ಟಿಯಿಂದ, ನೀವು ಸಾಧನದ ಜೊತೆ ಸಂಪರ್ಕಿಸಲು/ಪೇರ್ ಮಾಡಲು ಬಯಸುವ ಸಾಧನದ ಮೇಲೆ ಕ್ಲಿಕ್ ಮಾಡಿ.
- ನಿಮ್ಮ ಸಾಧನವು ಪಟ್ಟಿಯಲ್ಲಿ ಕಾಣಿಸದಿದ್ದರೆ, ಬ್ಲೂ ಲೈಟುಗಳು ಬ್ಲಿಂಕ್ (ನೀಲಿ ದೀಪಗಳು ಮಿನುಗುತ್ತಿವೆಯೇ) ಆಗುತ್ತಿವೆಯೇ ಎಂದು ಪರಿಶೀಲಿಸಿ. ನೀವು ಯಾವುದೇ ನೀಲಿ ದೀಪಗಳನ್ನು ನೋಡದಿದ್ದರೆ, ದಯವಿಟ್ಟು 'ಸಾಧನವನ್ನು ಆನ್ ಮಾಡುವುದು' (Turning on the device) ವಿಭಾಗವನ್ನು ನೋಡಿ.



- ಸಾಧನವನ್ನು ಒಮ್ಮೆ ಯಶಸ್ವಿಯಾಗಿ ಜೋಡಿಸಿದ (paired) ನಂತರ, ಎಲ್ಲಾ ಸಾಧನದ ನಿರ್ದಿಷ್ಟ ವಿವರಗಳನ್ನು ತೋರಿಸುವ ದೃಢೀಕರಣದ ಸಂದೇಶವು ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ.
- ಈಗ ಸಾಧನದ ಸೆಟಪ್ ಪೂರ್ಣಗೊಂಡಿದೆ, ಮತ್ತು ನಿಮ್ಮ ಔಷಧಿ ಸೇವನೆಯ ವೇಳಾಪಟ್ಟಿಯನ್ನು ನಿರ್ವಹಿಸಲು ನೀವು ಎಲ್ಲಾ ರೀತಿಯಲ್ಲೂ ಸಿದ್ಧರಿದ್ದೀರಿ.



## ಸಾಧನವನ್ನು ಆನ್ ಮಾಡುವುದು

ಆರಂಭಿಕ ಸೆಟಪ್ ಪ್ರಕ್ರಿಯೆಯಲ್ಲಿ ಸಾಧನವನ್ನು ಮೊಬೈಲ್ ಅಪ್ಲಿಕೇಶನ್‌ಗೆ ಸಂಪರ್ಕಿಸಲು ಸಾಧ್ಯವಾಗದಿದ್ದರೆ, ಮುಂದಿನ ಜೋಡಿ ಪರದೆಗಳು ನಿಮಗೆ ಆ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ನೀಡುತ್ತವೆ.

- ಸಾಧನಗಳನ್ನು ಸ್ಕ್ಯಾನ್ ಮಾಡುತ್ತಿರುವಾಗ, ಅಪ್ಲಿಕೇಶನ್‌ನಲ್ಲಿ ಯಾವುದೇ eLupihaler ಸಾಧನಗಳನ್ನು ಪಟ್ಟಿಮಾಡಲಾಗದಿದ್ದರೆ, 'Scan again' (ಮತ್ತೊಮ್ಮೆ ಸ್ಕ್ಯಾನ್ ಮಾಡಿ) ಬಟನ್ ಒತ್ತುವ ⓘ ಮೊದಲು ಆ ನಿರ್ದಿಷ್ಟ ಐಕಾನ್ ಮೇಲೆ ಕ್ಲಿಕ್ ಮಾಡಿ.




- ಪ್ರಕ್ರಿಯೆಯ ಮುಖಾಂತರ ಮಾರ್ಗದರ್ಶನ ನೀಡಲು ನೀವು 'Help' ಸ್ಕ್ರೀನ್ ಪಾಪ್-ಅಪ್ ಆಗಿ ಬಿಡುತ್ತದೆ.



## ಔಷಧಿ ವೇಳಾಪಟ್ಟಿ ನಿರ್ವಹಣೆ

ವೈದ್ಯರ ಸೂಚನೆಯಂತೆ (ಪ್ರಿಸ್ಕ್ರಿಪ್ಷನ್) ನೀವು ಔಷಧಿಯನ್ನು ಮತ್ತು ಅದರ ಸೇವನೆಯ ವೇಳಾಪಟ್ಟಿಯನ್ನು ಸೇರಿಸಬಹುದು ಅಥವಾ ಬದಲಾಯಿಸಬಹುದು.

### ಔಷಧಿಯನ್ನು ಸೇರಿಸಿ.

- ನಿಮ್ಮ ಔಷಧಿಗಳನ್ನು ಸೇರಿಸಲು ಪ್ರಾರಂಭಿಸಿ.




- ನೀವೊಂದು ನಿರ್ದಿಷ್ಟ ಔಷಧಿಗಾಗಿ ಹುಡುಕಬಹುದು ಮತ್ತು ಪಟ್ಟಿಯಲ್ಲಿರುವ ಔಷಧಿಗಳ ಪಕ್ಕದ '>' ಬಟನ್ ಕ್ಲಿಕ್ ಮಾಡುವ ಮೂಲಕ ಹೆಚ್ಚುವರಿ ಔಷಧಿಯ ವಿವರಗಳನ್ನು ವೀಕ್ಷಿಸಬಹುದು.






- ಡೋಸೇಜ್ (ಔಷಧಿಯ ಪ್ರಮಾಣ) ಮಾಹಿತಿಯೊಂದಿಗೆ ವೈದ್ಯರ ಸೂಚನೆಗೆ ಅನುಗುಣವಾಗಿ, ನೀವು ಬೆಳಿಗ್ಗೆ, ಮಧ್ಯಾಹ್ನ ಅಥವಾ ಸಂಜೆಯ ಸಮಯವನ್ನು ಆಯ್ಕೆ ಮಾಡಬಹುದು.




- ನೀವು ಇನ್ನೂ ಹೆಚ್ಚಿನ ಔಷಧಿಗಳನ್ನು ಸೇರಿಸಬೇಕಾಗಿದ್ದರೆ (ವೈದ್ಯರ ಸೂಚನೆಯಂತೆ), 'Add DPI' ಕ್ಲಿಕ್ ಮಾಡಿ.
- ನೀವು ನಿಮ್ಮ ಔಷಧಿಗಳ ವಿವರಗಳನ್ನು (ಪ್ರೊಫೈಲ್) ಪೂರ್ಣಗೊಳಿಸಿದ್ದರೆ, 'No, I don’t have any other DPI' ಎಂಬುದನ್ನು ಕ್ಲಿಕ್ ಮಾಡಿ.

- ಔಷಧಿ ಸೇವನೆಯ ವೇಳಾಪಟ್ಟಿಯನ್ನು ಕುರಿತ ಎಚ್ಚರಿಕೆಗಳನ್ನು ಅಥವಾ ಜ್ಞಾಪನೆಗಳನ್ನು ಪಡೆಯಲು ನೀವು ಅಪ್ಲಿಕೇಶನ್‌ನಲ್ಲಿ ರಿಮೈಂಡರ್‌ಗಳನ್ನೂ ಸಹ ಹೊಂದಿಸಬಹುದು.




- ನಿಮ್ಮ ಪ್ರೊಫೈಲ್‌ನಲ್ಲಿ ಎಲ್ಲಾ ಔಷಧಿಗಳನ್ನು ಉಳಿಸಿದ ನಂತರ, 'Let's Go' ಕ್ಲಿಕ್ ಮಾಡಿ.



## eLupihaler ನಿಂದ ಔಷಧಿಯನ್ನು ತೆಗೆದುಕೊಳ್ಳುವುದು ಹೇಗೆ

ಸಾಧನದೊಂದಿಗೆ ಯಶಸ್ವಿಯಾಗಿ ಸಂಪರ್ಕಿಸಿದ ನಂತರ, ಕೆಳಗಿನ ಹಂತಗಳನ್ನು ಅನುಸರಿಸುವ ಮೂಲಕ ನೀವು ಮೊಬೈಲ್ ಅಪ್ಲಿಕೇಶನ್‌ನೊಂದಿಗೆ ಅಥವಾ ಅದು ಇಲ್ಲದೆಯೇ ಇನ್ಹೇಲರ್ ಅನ್ನು ಬಳಸಬಹುದು.

- ಇನ್ಹೇಲರ್‌ನಿಂದ ಪ್ರೊಟೆಕ್ಷನ್ ಕ್ಯಾಪ್ ತೆಗೆಯಿರಿ ಮತ್ತು ಪವರ್ ಇಂಡಿಕೇಟರ್ ಜೊತೆ ಅಥವಾ ಎಲ್‌ಇಡಿ (LED) ನಿಮ್ಮ ಕಡೆಗೆ ಇರುವಂತೆ ಇನ್ಹೇಲರ್ ಅನ್ನು ಹಿಡಿದುಕೊಳ್ಳಿ.



- ಇನ್ಹೇಲರ್‌ನ ಬುಡವನ್ನು ದೃಢವಾಗಿ ಹಿಡಿದುಕೊಂಡು, ಬಾಣದ ಗುರುತುಗಳ ದಿಕ್ಕಿನಲ್ಲಿ ಮೌತ್‌ಪೀಸ್ ಅನ್ನು ತಿರುಗಿಸುವ ಮೂಲಕ ಇನ್ಹೇಲರ್ ಅನ್ನು ತೆರೆಯಿರಿ.



- ಒಂದು ಕ್ಯಾಪ್ಸುಲ್ ಅನ್ನು ತೆಗೆದುಕೊಂಡು ಅದನ್ನು ಇನ್ಹೇಲರ್‌ನ ಕ್ಯಾಪ್ಸುಲ್ ಚೇಂಬರ್‌ನಲ್ಲಿ ಇರಿಸಿ.
- ಕ್ಯಾಪ್ಸುಲ್ ಸಂಪೂರ್ಣವಾಗಿ ಚೇಂಬರ್‌ನ ಒಳಗಡೆ ಇದೆಯೇ ಎಂದು ಪರಿಶೀಲಿಸಿ.
- ಇಲ್ಲದಿದ್ದರೆ, ಕ್ಯಾಪ್ಸುಲ್ ಅನ್ನು ಸರಿಯಾಗಿ ಇರಿಸಿ.



- ಮೌತ್‌ಪೀಸ್ ಅನ್ನು ಮತ್ತೆ ಮುಚ್ಚುವ ಸ್ಥಿತಿಗೆ ತಿರುಗಿಸುವ ಮೂಲಕ ಇನ್ಹೇಲರ್ ಅನ್ನು ಮುಚ್ಚಿ.



- ಇನ್ಹೇಲರ್ ಅನ್ನು ನೇರವಾಗಿ (ಮೌತ್‌ಪೀಸ್ ಮೇಲ್ಮುಖವಾಗಿರುವಂತೆ) ಹಿಡಿದುಕೊಳ್ಳಿ ಹಾಗೂ ಹೆಬ್ಬೆರಳು ಮತ್ತು ತೋರುಬೆರಳಿನ ನಡುವೆ ಪುಶ್ ಬಟನ್‌ಗಳನ್ನು ಹಿಡಿದುಕೊಳ್ಳಿ. ಪವರ್ ಇಂಡಿಕೇಟರ್ ಅಥವಾ ಎಲ್‌ಇಡಿ ನಿಮ್ಮ ಕಡೆಗೆ ಇರುವಂತೆ ಇನ್ಹೇಲರ್ ಅನ್ನು ಹಿಡಿದುಕೊಳ್ಳಿ.
- ಎರಡೂ ಬೆರಳುಗಳನ್ನು ಏಕಕಾಲದಲ್ಲಿ ಬಳಸಿ, ವೇಗವಾಗಿ ಮತ್ತು ದೃಢವಾದ ಒತ್ತಡದೊಂದಿಗೆ ಈ ಬಟನ್‌ಗಳನ್ನು ಒಮ್ಮೆ ಒತ್ತಿರಿ. ಈಗ ಈ ಕ್ಯಾಪ್ಸುಲ್ ಸಮವಾಗಿ ಚುಚ್ಚಲ್ಪಡುತ್ತದೆ.



- ಸಾಧನದಲ್ಲಿರುವ ಎರಡೂ ಎಲ್‌ಇಡಿಗಳು ನಿಧಾನವಾಗಿ ಮಿನುಗಲು ಪ್ರಾರಂಭಿಸುತ್ತವೆ. ಈ ಹಂತದಲ್ಲಿ, ನಿಮ್ಮ ಬಳಿ ಮೊಬೈಲ್ ಫೋನ್ ಇದ್ದರೆ, ಉಸಿರಾಟದ ಪ್ರಕ್ರಿಯೆಯನ್ನು ನೈಜ ಸಮಯದಲ್ಲಿ ಟ್ರ್ಯಾಕ್ ಮಾಡಲು ಸಾಧನವನ್ನು ಸ್ಕ್ಯಾನ್ ಮಾಡಿ ಜೋಡಿಸಬಹುದು.
- ಇದು ಉಸಿರಾಟದ ಕ್ರಿಯೆಗೆ ಸಿದ್ಧವಾಗಲು ನಿಮ್ಮ ಶ್ವಾಸಕೋಶವನ್ನು ಖಾಲಿ ಮಾಡುವ ಸೂಚನೆಯಾಗಿದೆ.
- ನಿಮ್ಮ ಬಾಯಿಯಿಂದ ಸ್ವಲ್ಪ ದೂರಕ್ಕೆ ಈ ಸಾಧನ ಹಿಡಿದುಕೊಳ್ಳಿ ಮತ್ತು ಎಲ್‌ಇಡಿ ಮಿನುಗುವುದನ್ನು ಗಮನಿಸುತ್ತಾ, ನಿಧಾನವಾಗಿ ಉಸಿರನ್ನು ಹೊರಬಿಟ್ಟು ಶ್ವಾಸಕೋಶವನ್ನು ಖಾಲಿ ಮಾಡಿ.



- ಒಮ್ಮೆ ಶ್ವಾಸಕೋಶ ಖಾಲಿಯಾದ ನಂತರ, ಇನ್ಹೇಲರ್ ಅನ್ನು ನಿಮ್ಮ ಬಾಯಿಯ ಹತ್ತಿರಕ್ಕೆ ತನ್ನಿ ಮತ್ತು ಅದನ್ನು ಅಡ್ಡಲಾಗಿ ಹಿಡಿದುಕೊಳ್ಳಿ.
- ನಿಮ್ಮ ತಲೆಯನ್ನು ಸ್ವಲ್ಪ ಹಿಂದಕ್ಕೆ ಬಾಗಿಕೊಳ್ಳಿ.
- ಇನ್ಹೇಲರ್‌ನ ಮೌತ್‌ಪೀಸ್ ಅನ್ನು ನಿಮ್ಮ ಬಾಯಿಯೊಳಗೆ, ಹಲ್ಲುಗಳ ಹಿಂದೆ ಮತ್ತು ನಾಲಿಗೆಯ ಮೇಲೆ ಸಂಪೂರ್ಣವಾಗಿ ಇರಿಸಿ.
- ಮೌತ್‌ಪೀಸ್ ಸುತ್ತಲೂ ನಿಮ್ಮ ತುಟಿಗಳನ್ನು ಬಿಗಿಯಾಗಿ ಮುಚ್ಚಿ.
- ವೇಗವಾಗಿ ಆದರೆ ಸ್ಥಿರವಾಗಿ, ನಿಮಗೆ ಸಾಧ್ಯವಾದಷ್ಟು ಆಳವಾಗಿ ಉಸಿರನ್ನು ಒಳಗೆ ತೆಗೆದುಕೊಳ್ಳಿ.
- ಇನ್ಹೇಲರ್ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆ ಅದು 'ರಾಟ್ಲಿಂಗ್' (ಗಡಗಡ ಎನ್ನುವ) ಶಬ್ದವನ್ನು ಮಾಡುತ್ತದೆ; ಏಕೆಂದರೆ ಪುಡಿಯನ್ನು ಹೊರಹಾಕಲು ಕ್ಯಾಪ್ಸುಲ್ ಚೇಂಬರ್‌ನಲ್ಲಿ ತಿರುಗುತ್ತಿರುತ್ತದೆ.



- ನಿಮ್ಮ ಬಾಯಿಯಿಂದ ಇನ್ಹೇಲರ್ ಅನ್ನು ತೆಗೆಯಿರಿ. ನಿಮ್ಮ ಶ್ವಾಸಕೋಶವು ಔಷಧಿಯನ್ನು ಹೀರಿಕೊಳ್ಳುವಂತೆ ಮಾಡಲು ಸುಮಾರು 5-10 ಸೆಕೆಂಡುಗಳ ಕಾಲ ಉಸಿರನ್ನು ಹಿಡಿದಿಟ್ಟುಕೊಳ್ಳಿ. ನಂತರ ನಿಧಾನವಾಗಿ ಉಸಿರನ್ನು ಹೊರಬಿಡಿ. ಇನ್ಹೇಲರ್ ತೆರೆದು ಕ್ಯಾಪ್ಸುಲ್ ಖಾಲಿಯಾಗಿದೆಯೇ ಎಂದು ಪರಿಶೀಲಿಸಿ; ಇಲ್ಲದಿದ್ದರೆ, ಉಸಿರಾಟದ ಪ್ರಕ್ರಿಯೆಯನ್ನು ಪುನರಾವರ್ತಿಸಿ.




- ಉಸಿರಾಟದ ಪ್ರಕ್ರಿಯೆ ಪೂರ್ಣಗೊಂಡ ನಂತರ, ನೀರಿನಿಂದ ಬಾಯಿಯನ್ನು ಮುಕ್ಕಳಿಸಿ; ನೀರನ್ನು ನುಂಗಬೇಡಿ. ಇನ್ಹೇಲರ್ ತೆರೆಯಿರಿ ಮತ್ತು ಖಾಲಿ ಕ್ಯಾಪ್ಸುಲ್ ಅನ್ನು ತೆಗೆದುಹಾಕಿ. ಇನ್ಹೇಲರ್ ಮೇಲೆ ರಕ್ಷಣಾ ಕ್ಯಾಪ್ ಅನ್ನು ಮತ್ತೆ ಇರಿಸಿ.



- ಡೇಟಾವನ್ನು ಸಿಂಕ್ ಮಾಡಲಾಗುತ್ತಿದೆ:
    - ನಿಮ್ಮ ಮೊಬೈಲ್‌ನಲ್ಲಿ eLupihaler ಅಪ್ಲಿಕೇಶನ್‌ಗೆ

ಸಂಪರ್ಕಿಸಿದಾಗ ಆ ಇನ್ಹೇಲರ್ ಸ್ವಯಂಚಾಲಿತವಾಗಿ ಡೇಟಾವನ್ನು ಸಿಂಕ್ರೊನೈಸ್ ಮಾಡುತ್ತದೆ.



- ಇನ್ಹೇಲರ್ ಅನ್ನು ಸ್ವಚ್ಛಗೊಳಿಸುವುದು:
    - ನಿಮ್ಮ eLupihaler ನ ಯಾವುದೇ ಭಾಗವನ್ನು ನೀರಿನಲ್ಲಿ ತೊಳೆಯಬೇಡಿ ಅಥವಾ ಹಾಕಬೇಡಿ. eLupihaler ನಲ್ಲಿ ಪುಡಿ ಇರುತ್ತದೆ ಮತ್ತು ಅದನ್ನು ಯಾವಾಗಲೂ ಸ್ವಚ್ಛವಾಗಿ ಮತ್ತು ಒಣಗಿಸಿರಬೇಕು.
    - ಮೌತ್‌ಪೀಸ್ ಅನ್ನು ಸ್ವಚ್ಛಗೊಳಿಸುವ ಅಗತ್ಯವಿದ್ದರೆ, ಅದನ್ನು ಒಣ ಬಟ್ಟೆಯಿಂದ ಅಥವಾ ಟಿಶ್ಯೂ ನಿಂದ ನಿಧಾನವಾಗಿ ಮೃದುವಾಗಿ ಒರೆಸಿ.

## ಇನ್ಹೇಲೇಷನ್ (ಉಸಿರೆಳೆದುಕೊಳ್ಳುವ) ವರದಿಗಳನ್ನು ವೀಕ್ಷಿಸುವುದು

ಒಂದು ಸಾಧನದ ಮೂಲಕ ಸಂಗ್ರಹಿಸಲಾದ ನಿಮ್ಮ ಇನ್ಹಲೇಷನ್ ಡೇಟಾ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಸಂಗ್ರಹಿಸಲ್ಪಡುತ್ತದೆ ಮತ್ತು ಅಪ್ಲಿಕೇಶನ್‌ನ ಅನೇಕ ವಿಭಾಗಗಳಲ್ಲಿ ಪ್ರದರ್ಶನಗೊಳ್ಳುತ್ತವೆ. ಈ ಸೂಚನೆಗಳ ಸೆಟ್‌ಗಳು PDF ಸ್ವರೂಪದಲ್ಲಿ ಇತರರೊಂದಿಗೆ ಹಂಚಿಕೊಳ್ಳಬಹುದಾದ ವರದಿಗಳನ್ನು ಪತ್ತೆಹಚ್ಚಲು, ವೀಕ್ಷಿಸಲು ಮತ್ತು ರಚಿಸುವಲ್ಲಿ ನಿಮಗೆ ನೆರವಾಗುತ್ತವೆ.

- ನಿಮ್ಮ ಹೋಂಸ್ಕ್ರೀನ್ ಪರದೆ ಮೇಲೆ, ಔಷಧಿ ಅನುಸರಣೆಯ ಇತಿಹಾಸವು ಅನೇಕ ಸೆಕ್ಷನ್‌ಗಳ ಉದ್ದಗಲಕ್ಕೂ ಪ್ರದರ್ಶಿಸಲ್ಪಡುತ್ತದೆ.
- ಸಂಖ್ಯಾತ್ಮಕ ಸ್ಥಗಿತದೊಂದಿಗೆ ಅನುಸರಣೆಯನ್ನು ಒಂದು ಚಿತ್ರಾತ್ಮಕ (ಇಂಧನ ಗೇಜ್) ಸ್ವರೂಪದಲ್ಲಿ ಪ್ರದರ್ಶಿಸಲಾಗುತ್ತದೆ.




- ತಪ್ಪಿಹೋದ, ಸಕಾಲಕ್ಕೆ ಮತ್ತು ಮುಂಬರುವ ಸೂಚಕಗಳೊಂದಿಗೆ ಕ್ಯಾಲೆಂಡರ್ ಸ್ವರೂಪದಲ್ಲಿ ಅನುಸರಣೆಯನ್ನೂ ಸಹ ವೀಕ್ಷಿಸಬಹುದು.



• ವರದಿಯ (ರಿಪೋರ್ಟ್) ಬಟನ್ ಮೇಲೆ ಕ್ಲಿಕ್ ಮಾಡುವುದರಿಂದ ಔಷಧಿ ಇತಿಹಾಸ ಪಟ್ಟಿಯಾಗುತ್ತದೆ.

• ಇನ್ಹಲೇಷನ್ ಡೇಟಾದ ಸುತ್ತಲಿನ ವಿವರಗಳನ್ನು ವೀಕ್ಷಿಸಲು ನೀವು ವೈಯಕ್ತಿಕ ವರದಿಯ (ರಿಪೋರ್ಟ್) ಬಟನ್ ಮೇಲೆ ಕ್ಲಿಕ್ ಮಾಡಬಹುದು.




• ಇನ್ಹಲೇಷನ್ ಡೇಟಾವನ್ನು ಫ್ಲೋ ರೇಟ್ vs ಟೈಮ್ ಗ್ರಾಫ್ ರೂಪದಲ್ಲಿಯೂ ಪ್ರದರ್ಶಿಸಲಾಗುತ್ತದೆ, ಇದು ನಿಮ್ಮ ಉಸಿರಾಟದ ತಂತ್ರ vs ಶಿಫಾರಸನ್ನು ವಿಶ್ಲೇಷಿಸಲು ಮತ್ತು ಹೋಲಿಸಲು ಸಹಾಯ ಮಾಡುತ್ತದೆ.

• ವರದಿಯು ಹರಿವಿನ ಪ್ರಮಾಣ, ಅವಧಿ ಮತ್ತು ಒಟ್ಟಾರೆ ಫಲಿತಾಂಶದ ಗುಣಾತ್ಮಕ ಗ್ರ್ಯಾಟಿಂಗ್ ಅನ್ನು ಪರಿಣಾಮಕಾರಿತ್ವವನ್ನು ಸುಧಾರಿಸಲು ಯಾವುದಾದರೂ ಸಲಹೆಗಳೊಂದಿಗೆ ಪ್ರದರ್ಶಿಸುತ್ತದೆ.



## ಕಟ್ಟುಪಾಡು ಸಂಪಾದಿಸಿ.




- ಕಟ್ಟುಪಾಡು ಮಾರ್ಪಡಿಸಲು, ನಿಮ್ಮ ಪ್ರೊಫೈಲ್‌ನಿಂದ ಔಷಧಿಯ ಮೇಲೆ ಕ್ಲಿಕ್ ಮಾಡಿ.

  ಗಮನಿಸಿ: ನೀವು ಒಂದು ಹೊಸ ಔಷಧಿಯನ್ನು ಸೇರಿಸುತ್ತಿದ್ದರೆ ಆಡ್ ಮೆಡಿಸಿನ್ ಫ್ಲೋ ಅನ್ನು ನೋಡಿ.




- ಬೆಳಿಗ್ಗೆ', 'ಮಧ್ಯಾಹ್ನ' ಅಥವಾ 'ಸಂಜೆ' ಆಯ್ಕೆಗಳ ಮೇಲೆ ಕ್ಲಿಕ್ ಮಾಡುವ ಮೂಲಕ ನೀವು ವೇಳಾಪಟ್ಟಿಯನ್ನು ಮಾರ್ಪಡಿಸಬಹುದು.
- ಪ್ರತಿಯೊಂದು ವೇಳಾಪಟ್ಟಿಗೂ ನೀವು ಡೋಸೇಜ್ (ಒಂದೇ ಅಥವಾ ಅನೇಕ ಡೋಸ್‌ಗಳು) ಪ್ರಮಾಣವನ್ನು ನಿಗದಿಪಡಿಸಬಹುದು.

## ಪಾಲನೆದಾರರನ್ನು (Caregiver) ಸೇರಿಸುವುದು

ನಿಮ್ಮ ಪ್ರೊಫೈಲ್‌ಗೆ ಒಬ್ಬ **Caregiver** (ಪಾಲನೆದಾರರಾಗಿ)ಆಗಿ ಒಬ್ಬ ಆರೈಕೆದಾತರನ್ನಾಗಲೀ ಅಥವಾ ಕುಟುಂಬದ ಸದಸ್ಯರೊಬ್ಬರನ್ನಾಗಲೀ ಸೇರಿಸಲು ನಿಮಗೆ ಈ ಅಪ್ಲಿಕೇಶನ್ ಅವಕಾಶ ನೀಡುತ್ತದೆ. ಅವರನ್ನು ಸೇರಿಸಲು ಈ ಸರಳ ಹಂತಗಳನ್ನು ಅನುಸರಿಸಿ. ನಿಮ್ಮ ಆರೋಗ್ಯ ನಿರ್ವಹಣೆಗೆ ಬೆಂಬಲ ನೀಡುವ ಸಲುವಾಗಿ ನಿಮ್ಮ ಔಷಧಿಗಳ ದಾಖಲೆಗಳನ್ನು/ಇತಿಹಾಸವನ್ನು ಪರಿಶೀಲಿಸಲು ಅವರಿಗೆ ಸಾಧ್ಯವಾಗುತ್ತದೆ.

- ಹೋಮ್ ಸ್ಕ್ರೀನ್‌ನ ತಳಭಾಗದಲ್ಲಿ, ನೀವು ಒಂದು 'Caregiver' (ಪಾಲನೆದಾರರು) ವಿಭಾಗವನ್ನು ಕಾಣಬಹುದು. ಪಾಲನೆದಾರರನ್ನು ಸೇರಿಸಲು, ದಯವಿಟ್ಟು 'Add a caregiver' ಬಟನ್ ಮೇಲೆ ಕ್ಲಿಕ್ ಮಾಡಿ.




- ವಿನಂತಿಯನ್ನು ಪ್ರಾರಂಭಿಸಲು ಪಾಲನೆದಾರರ ಮೊಬೈಲ್ ಸಂಖ್ಯೆಯನ್ನು ನೀಡುವಂತೆ ನಿಮಗೆ ಕೇಳಲಾಗುತ್ತದೆ.



- Caregivers' ವಿಭಾಗದ ಅಡಿಯಲ್ಲಿ ವಿನಂತಿಯ ಸ್ಥಿತಿಯನ್ನು ನೀವು ಪರಿಶೀಲಿಸಲು ಸಾಧ್ಯವಾಗಲಿದೆ.




- ವಿನಂತಿಯು ಯಶಸ್ವಿಯಾಗಿ ಅನುಮೋದನೆಗೊಂಡ ನಂತರ, ನೀವು ಪಾಲನೆದಾರರ ವಿವರಗಳನ್ನು ನೋಡಬಹುದು.
- ನಿಮ್ಮ ಅಗತ್ಯಗಳಿಗೆ ಅನುಗುಣವಾಗಿ ನೀವು ಒಬ್ಬರು ಅಥವಾ ಹೆಚ್ಚಿನ ಪಾಲನೆದಾರರನ್ನು ಸೇರಿಸಬಹುದು.
- Delete' (ಅಳಿಸಿಹಾಕು) ಬಟನ್ ಕ್ಲಿಕ್ ಮಾಡುವ ಮೂಲಕ ನೀವು ಒಬ್ಬ ನಿರ್ದಿಷ್ಟ ಪಾಲನೆದಾರರನ್ನು ತೆಗೆದುಹಾಕಬಹುದು ಅಥವಾ ಸಂಪರ್ಕ ಕಡಿತಗೊಳಿಸಬಹುದು.



## ಪಾಲನೆದಾರರ ಕಾರ್ಯವಿಧಾನ (Caregiver Flow)

ಆನ್‌ಬೋರ್ಡಿಂಗ್ ಸಮಯದಲ್ಲಿ ನೀವು ಒಬ್ಬ ಪಾಲನೆದಾರರ ಪಾತ್ರವನ್ನು (Caregiver role) ಆಯ್ಕೆ ಮಾಡಿದ್ದರೆ, ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳಲು ಈ ಹಂತಗಳನ್ನು ಅನುಸರಿಸಿ.

- ದಯವಿಟ್ಟು ನಿಮ್ಮ ಪಾತ್ರವನ್ನು (role) 'ರೋಗಿ' (Patient) ಎಂದು ಅಥವಾ 'ಪಾಲನೆ ಮಾಡುವವರು' (Caregiver) ಎಂದು ಆಯ್ಕೆಮಾಡಿ.
- Caregiver ಪಾತ್ರಕ್ಕಾಗಿ 'Caregiver Flow' ವಿಭಾಗವನ್ನು ನೋಡಿ.




- Caregiver ಆಗಿ ನಿಮ್ಮ ಆಯ್ಕೆಯನ್ನು ದೃಢೀಕರಿಸಿ.



- ನಿಮ್ಮ ಮೂಲ ಪ್ರೊಫೈಲ್ ವಿವರಗಳನ್ನು ನಿರ್ವಹಿಸಲು 'ಮುಂದುವರಿಸಿ' (> ಬಟನ್) ಬಟನ್ ಮೇಲೆ ಕ್ಲಿಕ್ ಮಾಡಿ.




- ನಿಮ್ಮ ಹೆಸರನ್ನು ನಮೂದಿಸುವ ಮೂಲಕ ದಯವಿಟ್ಟು ನಿಮ್ಮ ಪ್ರೊಫೈಲ್ ಅನ್ನು ಪೂರ್ಣಗೊಳಿಸಿ.



- Caregiver ಪಾತ್ರದಲ್ಲಿ ಯಶಸ್ವಿ ನೋಂದಣಿಯಾದ ನಂತರ, ನಿಮ್ಮನ್ನು ಒಬ್ಬ Caregiver ಅನ್ನಾಗಿ (ಪಾಲನೆದಾರ) ನಿಯೋಜಿಸಿದ ವ್ಯಕ್ತಿಗಳ ಪಟ್ಟಿಯನ್ನು ತೋರಿಸುವ ಪರದೆಗೆ ನಿಮ್ಮನ್ನು ಕರೆದೊಯ್ಯಲಾಗುತ್ತದೆ.
- ನೀವು ವೈಯಕ್ತಿಕ ವಿನಂತಿಗಳನ್ನು Approve ಮಾಡಬಹುದು ಅಥವಾ Reject ಮಾಡಬಹುದು.




- ಒಮ್ಮೆ ಅನುಮೋದಿಸಿದ ನಂತರ, '>' ಬಟನ್ ಕ್ಲಿಕ್ ಮಾಡುವ ಮೂಲಕ, ಆಯ್ಕೆಮಾಡಿದ ವ್ಯಕ್ತಿಗಳ ಔಷಧಿ ಮತ್ತು ಔಷಧಿ ಸೇವನೆಯ ಇತಿಹಾಸದ ವಿವರಗಳನ್ನು ನೀವು ವೀಕ್ಷಿಸಬಹುದು.



- ರೋಗಿಯ ದಾಖಲೆ ಮೇಲೆ ಕ್ಲಿಕ್ ಮಾಡಿದಾಗ, ನಿಮ್ಮನ್ನು 'Patient View' ಗೆ (ರೋಗಿಯ ವೀಕ್ಷಣೆ) ಕರೆದೊಯ್ಯಲಾಗುತ್ತದೆ.




- ರೋಗಿಗೆ ಸಂಬಂಧಿಸಿದ ಕೆಲವೊಂದು ಅಂಕಿಅಂಶಗಳನ್ನು ನೋಡಲು ಕೆಳಕ್ಕೆ ಸ್ಕ್ರಾಲ್ ಮಾಡಿ.



- ಆಯ್ಕೆಮಾಡಿದ ರೋಗಿಗಳಿಗೆ ಒಂದು ಮಾಸಿಕ ಕ್ಯಾಲೆಂಡರ್ ವೀಕ್ಷಣೆಯಲ್ಲಿ ಔಷಧಿ ಸೇವನೆಯ ನಿಷ್ಠೆ (adherence) ಮತ್ತು ಇನ್ಹಲೇಷನ್ ಗುಣಮಟ್ಟದ ವಿವರಗಳನ್ನು ನೋಡಲು ಮತ್ತಷ್ಟು ಕೆಳಕ್ಕೆ ಸ್ಕ್ರಾಲ್ ಮಾಡಿ.



## ಬ್ಯಾಟರಿ ಅವಧಿ

- ಬದಲಾಯಿಸಲಾಗದ ಒಂದು ಬ್ಯಾಟರಿಯು ಗರಿಷ್ಠ 600 ಪಫ್‌ಗಳವರೆಗೆ (ಉಸಿರೆಳೆತದವರೆಗೆ) ಕಾರ್ಯನಿರ್ವಹಿಸುತ್ತದೆ; ಇದು ಸಾಧನದ ಒಟ್ಟು ಬಳಕೆಯ ಅವಧಿಯನ್ನು ಸೂಚಿಸುತ್ತದೆ.

## ಸುರಕ್ಷತಾ ಮುನ್ನೆಚ್ಚರಿಕೆಗಳು

- ಸ್ಫೋಟಕ ಪದಾರ್ಥಗಳ/ವಸ್ತುಗಳ ಹತ್ತಿರ ಈ ಸಾಧನವನ್ನು ಬಳಸಬೇಡಿ.
- ಅತಿಯಾದ ಧೂಳು ಮತ್ತು ಕಂಪನವಿರುವ ಪರಿಸರದಲ್ಲಿ ಈ ಸಾಧನವನ್ನು ಬಳಸಬೇಡಿ.
- ಸಾಧನವನ್ನು ಶಾಖದ ಮೂಲಗಳ ಹತ್ತಿರ ಇಡಬೇಡಿ.
- ಸಾಧನವನ್ನು ಒಂದು ಒಣಗಿದ ಸ್ಥಾನದಲ್ಲಿ ಸಂಗ್ರಹಿಸಿ.
- eLupihaler ನಲ್ಲಿ ಒಂದು ಲಿಥಿಯಂ ಬ್ಯಾಟರಿ ಇರುತ್ತದೆ; ಇದರ ಬಳಕೆಯ ನಂತರ ಸ್ಥಳೀಯ ನಿಯಮಗಳಿಗೆ ಅನುಗುಣವಾಗಿ ಇದನ್ನು ವಿಲೇವಾರಿ ಮಾಡಬೇಕು

### 1.1. ಪರಿಸರದ ಸ್ಥಿತಿಗತಿಗಳು:

ತಾಪಮಾನದ ವ್ಯಾಪ್ತಿ: 10°C ನಿಂದ 40°C ವರೆಗೆ.

ಸಾಪೇಕ್ಷ ಆರ್ದ್ರತೆಯ ವ್ಯಾಪ್ತಿ: 20% ನಿಂದ 90% ವರೆಗೆ.

ವಾತಾವರಣದ ಒತ್ತಡದ ವ್ಯಾಪ್ತಿ: 600 mBar ನಿಂದ 1060 mBar ವರೆಗೆ.

ಈ ಸಾಧನವು ಸಮುದ್ರ ಮಟ್ಟದಿಂದ ≤ 2,000 ಮೀಟರ್‌ಗಿಂತ ಕಡಿಮೆ ಎತ್ತರದಲ್ಲಿ ಕಾರ್ಯನಿರ್ವಹಿಸಲು ಉದ್ದೇಶಿಸಲಾಗಿದೆ.

### 1.2. ಸಂಗ್ರಹಣೆ:

ತಾಪಮಾನದ ವ್ಯಾಪ್ತಿ: 5°C ನಿಂದ 40°C ವರೆಗೆ.

ಸಾಪೇಕ್ಷ ಆರ್ದ್ರತೆಯ ವ್ಯಾಪ್ತಿ: 5% ನಿಂದ 95% ವರೆಗೆ.

### 1.3. ಸಾಗಣೆ ಸಾಮರ್ಥ್ಯ.

ತಾಪಮಾನದ ವ್ಯಾಪ್ತಿ: 5°C ನಿಂದ 40°C ವರೆಗೆ.

ಸಾಪೇಕ್ಷ ಆರ್ದ್ರತೆಯ ವ್ಯಾಪ್ತಿ: 5% ನಿಂದ 95% ವರೆಗೆ.

## ಬಳಸಲಾದ ಚಿಹ್ನೆಗಳು

| | |
|---|---|
|  | ಒಂದು ದಿನಾಂಕದೊಂದಿಗೆ ಇರುವ, ಈ ಚಿಹ್ನೆಯು ಒಂದು ಸಾಧನದ ತಯಾರಿಕೆಯ ದಿನಾಂಕವನ್ನು ಸೂಚಿಸುತ್ತದೆ. |
|  | ಸರಿಯಾದ ಬಳಕೆಯ ಮಾಹಿತಿಗಾಗಿ ಸಾಧನದ ಸೂಚನೆಗಳನ್ನು ಪರಿಶೀಲಿಸುವಂತೆ ಈ ಚಿಹ್ನೆಯು ಬಳಕೆದಾರರಿಗೆ ಸೂಚಿಸುತ್ತದೆ. |
|  | ಕಾನೂನುಬದ್ಧ ತಯಾರಕರನ್ನು (Lupin Limited) ಸೂಚಿಸುತ್ತದೆ. |
| SN | ಕ್ರಮ ಸಂಖ್ಯೆ (Serial Number). ಈ ಚಿಹ್ನೆಯೊಂದಿಗೆ ಸಾಧನದ ಕ್ರಮ ಸಂಖ್ಯೆಯು ಇರುತ್ತದೆ. |
|  | ಸಾಮಾನ್ಯ ಎಚ್ಚರಿಕೆಯ ಚಿಹ್ನೆ |
| LOT | ಬ್ಯಾಚ್ ಕೋಡ್ |
| IP21 | ಪ್ರವೇಶ ರಕ್ಷಣೆ (Ingress Protection)<br>IP2X: IPX1 12.5 ಮಿಮೀಗಿಂತ ದೊಡ್ಡದಾದ ಘನ ವಸ್ತುಗಳಿಂದ ರಕ್ಷಣೆಯಿದೆ: ಲಂಬವಾಗಿ ಬೀಳುವ ನೀರಿನ ಹನಿಗಳಿಂದ ರಕ್ಷಣೆಯಿದೆ |
|  | ಮಿಲಿಲೀಟರ್‌ಗಳಲ್ಲಿ ಔಷಧದ ಬಳಕೆ |
|  | ಮಳೆಯಿಂದ ದೂರವಿಡಿ |
|  | ಒಡೆಯುವ ಸಾಧ್ಯತೆಯಿದೆ, ಎಚ್ಚರಿಕೆಯಿಂದ ನಿರ್ವಹಿಸಿ |
|  | ತಾಪಮಾನದ ಮಿತಿ |
|  | ಆರ್ದ್ರತೆಯ ಮಿತಿ |
|  | ಪ್ಯಾಕೇಜ್ ಹಾನಿಗೊಳಗಾಗಿದ್ದರೆ ಬಳಸಬೇಡಿ |
|  | ಬಳಕೆಯ ಅಂತಿಮ ದಿನಾಂಕ |

## ಎಚ್ಚರಿಕೆಗಳು

- eLupihaler ಸಾಧನವನ್ನು ಎಚ್ಚರಿಕೆಯಿಂದ ನಿರ್ವಹಿಸಿ. ಅದು ಕೆಳಗೆ ಬೀಳದಂತೆ ನೋಡಿಕೊಳ್ಳಿ.

ಕೆಳಗೆ ಬಿದ್ದರೆ ಆ ಸಾಧನವು ಹಾನಿಗೊಳಗಾಗಬಹುದು.

## ಪ್ರಮುಖ ಸೂಚನೆ

- eLupihaler ಸಾಧನವನ್ನು ಬಿಚ್ಚಿಡಲು (ಡಿಸ್‌ಅಸೆಂಬಲ್ ಮಾಡಲು) ಪ್ರಯತ್ನಿಸಬೇಡಿ.
- ಒಂದು eLupihaler ಸಾಧನವನ್ನು ಕೇವಲ ಒಂದು ಮೊಬೈಲ್‌ಗೆ ಮಾತ್ರ ಸಂಪರ್ಕಿಸಬಹುದಾಗಿದೆ.
- ಒಮ್ಮೆ ಬ್ಯಾಟರಿ ಖಾಲಿಯಾದ ನಂತರ ಬಳಕೆದಾರರು ಒಂದು ಹೊಸ ಸಾಧನವನ್ನು ಪಡೆಯಬೇಕಾಗುತ್ತದೆ.
- ಒಂದುವೇಳೆ ಸಾಧನವು ಮೊಬೈಲ್ ಫೋನ್ ಅಪ್ಲಿಕೇಶನ್ ಜೊತೆಗೆ ಸಂಪರ್ಕಗೊಳ್ಳದಿದ್ದರೆ, ಅದಕ್ಕೆ ಒಂದು ಕಡಿಮೆ ಬ್ಯಾಟರಿ ಮಟ್ಟ ಕಾರಣ ಆಗಿರಬಹುದು. ನೀನು ಬಟನ್‌ಗಳನ್ನು ಒತ್ತಿದಾಗ ನೀಲಿ ಮತ್ತು ಹಸಿರು ದೀಪಗಳು ಪರ್ಯಾಯವಾಗಿ ಮಿನುಗಿದರೆ, ಅದು ಈ ಸ್ಥಿತಿಯನ್ನು ಸೂಚಿಸುತ್ತದೆ.

## ಅನುಸರಣೆ ಅಗತ್ಯಗಳು

| **ಉಲ್ಲೇಖಿತ ಮಾನದಂಡಗಳು:** |
|---|
| IEC 60601-1: ವೈದ್ಯಕೀಯ ಸಾಧನಗಳು: ಸುರಕ್ಷತೆ ಮತ್ತು ಅಗತ್ಯ ಕಾರ್ಯಕ್ಷಮತೆಗಾಗಿ ಸಾಮಾನ್ಯ ಅವಶ್ಯಕತೆಗಳು. |
| IEC 60601-1-2: ವೈದ್ಯಕೀಯ ಸಾಧನಗಳು: ಪೂರಕ ಮಾನದಂಡ: ವಿದ್ಯುತ್ಕಾಂತೀಯ ಹೊಂದಾಣಿಕೆ (Electromagnetic Compatibility). |
| IEC 62304: ವೈದ್ಯಕೀಯ ಸಾಧನಗಳು - ಸಾಫ್ಟ್‌ವೇರ್ ಜೀವನ ಚಕ್ರ ಪ್ರಕ್ರಿಯೆಗಳು. |
| ISO 14971: ವೈದ್ಯಕೀಯ ಸಾಧನಗಳು - ವೈದ್ಯಕೀಯ ಸಾಧನಗಳ ಅಪಾಯ ನಿರ್ವಹಣೆಯ ಅನ್ವಯ. |
| ISO 13485: ವೈದ್ಯಕೀಯ ಸಾಧನಗಳು - ಗುಣಮಟ್ಟ ನಿರ್ವಹಣಾ ವ್ಯವಸ್ಥೆ. |

## ವಿದ್ಯುತ್ಕಾಂತೀಯ ಹೊಂದಾಣಿಕೆ: IEC 60601-1-2: 2014

| **ಪ್ರತಿರೋಧಕತೆ ಪರೀಕ್ಷೆ (Immunity Test)** | **IEC 60601 ಪರೀಕ್ಷಾ ಮಟ್ಟ** | **ಅನುಸರಣೆ ಮಟ್ಟ** |
|---|---|---|
| ಎಲೆಕ್ಟ್ರೋಸ್ಟಾಟಿಕ್ ಡಿಸ್ಚಾರ್ಜ್ (ESD) IEC 61000-4-2 | ±8kV (ಸಂಪರ್ಕ ಬಿಡುಗಡೆ), ± 2kV, ±4kV, ±8kV, ±15kV (ಗಾಳಿಯ ಮೂಲಕ ಬಿಡುಗಡೆ) | ±8kV (ಸಂಪರ್ಕ ಬಿಡುಗಡೆ), ± 2kV, ±4kV, ±8kV, ±15kV (ಗಾಳಿಯ ಮೂಲಕ ಬಿಡುಗಡೆ) |
| RF ವಿಕಿರಣ ಪ್ರತಿರೋಧಕತೆ IEC 61000-4-3 (RF Radiated Immunity) | 3 V/m (10V/m ಗೃಹ ಆರೋಗ್ಯ ಸೇವೆಗಾಗಿ) 80 - 2,700MHz ನಲ್ಲಿ, AM ಮಾಡ್ಯುಲೇಶನ್. | 3 V/m (10V/m ಗೃಹ ಆರೋಗ್ಯ ಸೇವೆಗಾಗಿ) 80 - 2,700MHz ನಲ್ಲಿ, AM ಮಾಡ್ಯುಲೇಶನ್. |
| ವಿದ್ಯುತ್ ಆವರ್ತನ ಕಾಂತೀಯ ಕ್ಷೇತ್ರ (PFMF) IEC 61000-4-8 | 30 A/m | 30 A/m |